ಅಧ್ಯಕ್ಷರು —ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಮನವಿಯನ್ನೊಪ್ಪಿಸುವುದು

ಶ್ರೀ ಮಲ್ಲಾರಗೌಡ. ಎಸ್. ಪಾಟೀಲ್.—ಸ್ವಾಮಿ, ಈ ಕೆಳಕಂಡ ಮನವಗಳನ್ನು ಒಪ್ಪಿಸುತ್ತಿದ್ದೇನೆ.

ಅ) ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಬೋರಗಳ್ಳಿ ಗ್ರಾಮದಲ್ಲಿ ಕೆರೆಯ ನಿರ್ಮಾಣ.

ಆ) ಬೆಳಗಾಂ ಜಿಲ್ಲೆಯ ಸಂಕೇಶ್ವರ ತಾಲ್ಲೂಕಿನ ಹಳ್ಳಿಗಳಲ್ಲಿ ಪ್ರೌಢಶಾಲೆ ಪ್ರಾರಂಭಿಸುವುದು ಹಾಗೂ ಕುಡಿಯುವ ನೀರನ್ನೊದಗಿಸುವುದು.

ಇ) ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಹಂದಿ ಗೋಡು ಗ್ರಾಮದ ಉತ್ತರ ಕಲ್ಲಣ ಕೊಂಡಿಯಲ್ಲಿ ಕೆರೆ ನಿರ್ಮಾಣ,

ಈ) ಸಂಕೇಶ್ವರದ ಟೌನಿನಲ್ಲಿರುವ ರಾಣಿ ಚೆನ್ನಮ್ಮ ಆಸ್ಪತ್ರೆ ಮತ್ತು ಹೆರಿಗೆ ಆಸ್ಪತ್ರೆಗಳಿಗೆ ಇನ್ನೂ ಹೆಚ್ಚು ಹಾಸಿಗೆಗಳನ್ನೊದಗಿಸುವುದು.

ಅಧ್ಯಕ್ಷರು —ಮನವಿಗಳನ್ನು ಅರ್ಜಿಗಳ ಸಮಿತಿಗೆ ಒಪ್ಪಿಸಲಾಗಿದೆ. ಇನ್ನು, ಗಮನ ಸೆಳೆಯುವ ಸೂಚನೆಗಳು, ಬಂಗಾರಪ್ಪನವರೇ ನೀವು ಮಾತನಾಡಿ.

ಹಕ್ಕು ಭಾದ್ಯತಾ ಸೂಚನೆ

ವಿಷಯ —ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪ್ರಶ್ನೆ ತರಗತಿಗಳು ಬಹಿರಂಗವಾಗಿರುವುದು.

ಶ್ರೀ ಬಿ. ಎಸ್. ಎಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಒಂದು ಪ್ರಿವಿಲೆಜ್ ಮೋಷನ್ ನೋಟೀಸ್ ಕೊಟ್ಟಿದ್ದೇನೆ. ನನಗೆ ಮಾತನಾಡಲಿಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು.—ಮಾತನಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ೧೩ನೇ ವಯಮಾವಳಿ ಪ್ರಕಾರ ಈ ನಮ್ಮ ಹಕ್ಕುಚ್ಯುತಿಯಾಗಿದು ಆದನ್ನು ನಾನು ಮಾಡಿದ್ದೇನೆ.

ದಿನಾಂಕ ೪–೪–೮೫ ರಂದು ಎಸ್, ಎಸ್. ಎಲ್. ಸಿ. ಪರೀಕ್ಷೆಗೆ, ಲೆಕ್ಕದ ಕಪ್ರಶ್ನೆ ಪತ್ರಿಕೆಯನ್ನು ಕೊಡಬೇಕಾಗಿತ್ತು. ಆದರೆ ೩ನೇ ತಾರೀಖಿನ ದಿವಸವೇ ಆ ಪ್ರಶ್ನೆ ಪತ್ರಿಕೆ ನನಗೆ ಸಿಕ್ಕಿತ್ತು. ೪ನೇ ತಾರೀಖು ಬೆಳಿಗ್ಗೆ ಈ ಸದನ ಪ್ರಾರಂಭವಾದಾಗ ೯.೧೦ ಕ್ಕೆ ಪ್ರಶ್ನೆ ಪತ್ರಿಕೆಯನ್ನು ತಮ್ಮ ಮುಂದೆ ಇಟ್ಟಿದ್ದೆ. ಇದನ್ನು ಪರಿಶೀಲನೆ ಮಾಡಿ ಸನ್ಮಾನ್ಯ ಮಂತ್ರಿಗಳು "ಈ ಕೋಟಾ ಪತ್ರಿಕೆಯನ್ನು ಮಾನ್ಯ ಎಡಿಯೂರಪ್ಪನವರು ಏನು ಕೊಟ್ಟಿದ್ದಾರೆ. ಆದರಲ್ಲಿ ಒಂದೇ ಒಂದು ಪ್ರಶ್ನೆ ಮಾತ್ರ ಸ್ವಲ್ಪ ಹೋಲಿಕೆಯಾಗುವುದರಲ್ಲಿದೆ "ಎನ್ನುವ ಉತ್ತರವನ್ನು ಈ ಸದನಕ್ಕೆ ಕೊಟ್ಟಿದ್ದರು ಸ್ವಾಮಿ ೧.೪.೮೫ ರಂದು ಕನ್ನಡ ಪ್ರಶ್ನೆ ಪತ್ರಿಕೆ, ೨.೪.೮೫ ರಂದು ಇಂಗ್ಲೀಷ್ ಪತ್ರಿಕೆ ಸಹ ನನಗೆ ಮುಂಚಿತವಾಗಿ ಸಿಕ್ಕಿದ್ದವು. ೪ನೇ ತಾರೀಖು ಗಣಿತ ಪ್ರಶ್ನೆ ಪತ್ರಿಕೆಯದ್ದು ಸದನದ ಮುಂದಿಟ್ಟಾಗ ಅದನ್ನು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡದೆ ಒಂದೇ ಒಂದು ಪ್ರಶ್ನೆ ಮಾತ್ರ ಹೋಲಿಕೆ ಇದೆ. ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆ ಪತ್ರಿಕೆಯಲ್ಲಿ ೬೫ ನಂಡರುಂಗಳು ಇದ್ದವು ನಾನು ಕೊಟ್ಟಿದ್ದ ಪತ್ರಿಕೆಯಲ್ಲಿ ೩೫ ರಲ್ಲಿ ೩೦ ಅಂಕಗಳು ಪ್ರಶ್ನೆಗಳು ಸರಿಯಿದ್ದವು. ೫೫ ಅಂಕಗಳಿಗೆ ಸಂಬಂಧಪಟ್ಟ ಪ್ರಶ್ನೆಗಳು ಆದರಲ್ಲಿ ಇದ್ದವು. ಇಂತಹ ಪತ್ರಿಕೆ ಎರಡು ನಿಮಿಷ ಮುಂದೆ ಸಿಕ್ಕಿದರೂ ಸಾಕು, ನಗರಗಳಲ್ಲಿ ಇರತಕ್ಕಂಥ ವಿದ್ಯಾರ್ಥಿಗಳು ೬೫ ನಂಬರುಗಳಿಗೆ ೬೦ ನಂಬರಂಗಳನ್ನು ತೆಗೆಯತಕ್ಕಂಥ ಸಾಧ್ಯತೆ ಇರುತ್ತದೆ. ಆದರೆ ಇದರಿಂದ ಗ್ರಾಮಾಂತರ ಪ್ರದೇತಗಳಲ್ಲಿ ವಾಸವಾಗಿರತಕ್ಕಂಥ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ.....

ಅಧ್ಯಕ್ಷರು:—ತಾವು ಹೇಳಿದ್ದು ಗೊತ್ತಾಯಿತು. ಬೇಗ ಮುಂಗಿಸಿ ಬಿಡಿ.

ಶ್ರೀ ಬಿ, ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ನಾನು ಹೇಳುವುದು ನಾನು ಕೊಟ್ಟಿರುವ ಪ್ರಶ್ನೆ ಪತ್ರಿಕೆಯಲ್ಲಿ ೫೫ ಅಂಕಗಳದ್ದು ೩೦ ಪ್ರಶ್ನೆಗಳು ಬಂದಿವೆ. ಆದರೆ ಮಾನ್ಯ ಸಚಿವರು ಒಂದೇ ಒಂದು

ಪ್ರಶ್ನೆ ಬಂದಿದೆಯೆಂದು ಹೇಳಿ ಸಭೆಯನ್ನು ತಪ್ಪುದಾರಿಗೆ ಎಳೆದು, ನಮ್ಮ ಹಕ್ಕುಚ್ಯುತಿ ಮಾಡಿದ್ದಾರೆ. ಆದರಲ್ಲಿ ಸೀರಿಯಲ್ ನಂಬರ್ ಮಾತ್ರ ವ್ಯತ್ಯಾಸವಾಗಿದೆ. ಉದಾಹರಣೆಗೆ ನಾನು ಕೊಟ್ಟಿದ್ದಂತಹ ಪ್ರಶ್ನೆ ಪತ್ರಿಕೆಯಲ್ಲಿ ೭ನೇ ನಂಬರಿನ ಪ್ರಶ್ನೆ ಒರಿಜನಲ್ ಪತ್ರಿಕೆಯಲ್ಲಿ ೨೧ ಆಗಿದ್ದು, ಆದೇ ಪ್ರಶ್ನೆ ಬಂದಿದೆ. ಈ ರೀತಿ ಮಂತ್ರಿಗಳ ಹೇಳಿಕೆ ವ್ಯತ್ಯಾಸವಾಗಿದೆ, ಇದು ಇಷ್ಟು ಹಕ್ಕುಚ್ಯುತಿ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಂ. ಮತ್ತು ಇದರ ಬಗ್ಗೆ ತನಿಖೆ ಮಾಡಿ ಸನ್ಮಾನ್ಯ ರಘುಪತಿಯವರಿಗೆ ಸರಿಯಾದ ಹೇಳಿಕೆ ಕೊಡಬೇಕು, ಇಲ್ಲದಿದ್ದರೆ ಅವರು ಕ್ಷಮಾಪಣೆ ಕೇಳಬೇಕು ಎಂದಂ ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ತಮ್ಮ ಮೂಲಕ ತಂದಿರತಕ್ಕಂಥ ಹಕ್ಕುಚ್ಯುತಿ ನಿರ್ಣಯವನ್ನು ನಾನು ನೋಡಿದೆ ಅವರು ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಒಂದು ಮಾತ್ರ, ನಾನು ಮಾಹಿತಿ ಹೇಳುವುದರಲ್ಲಿ ತಪ್ಪಾಗಿದೆ. ಅದಕ್ಕೆ ಬೇಕಾದರೆ ಕ್ಷಮೆಂ ಕೇಳುತ್ತೇನೆ ಒಂದೇ ಒಂದು ಪ್ರಶ್ನೆ ಮಾತ್ರ ಹೊಲಿಕೆಯಾಗಿರುವ ತರಹ ವಿದ್ಯೆಯಿಂದು ನಾನು ಹೇಳಿದ್ದೆ. ಆದರೆ ಈಗ ಕುಲಂಕೂಷವಾಗಿ ಪರೀಶಲನೆ ಮಾಡಿದ ಮೇಲೆ ಐದು ಪ್ರಶ್ನೆಗಳ ಒಂದು ಹೋಲಿಕೆ ಆದರಲ್ಲಿ ಇದೆ. ಈ ಐದು ಪ್ರಶ್ನೆಗಳಿಗೆ ಎಷ್ಟು ಅಂಕಗಳು ಇದೆಯೆಂದರೆ ಕೇವಲ ಒಂಭತ್ತು ಅಂಕಗಳಂ ಮಾತ್ರ. ಒಟ್ಟು ೬೫ ಅಂಕಗಳಲ್ಲಿ ೯ ಅಂಕಗಳಿಗೆ ಯಾರು ಬೇಕಾದರೂ ಊಹಿಸಿದೆಯೇ ಈ ಪ್ರಶ್ನೆ ಪತ್ರಿಕೆಯನ್ನು ತಯಾರು ಮಾಡಲಿಕ್ಕೆ ಸಾಧ್ಯ ಇದೆ. ಯಾರಾದರೂಬರು ಮೇಷ್ಟು ಕುಳಿತು ಕೊಂಡು ಈ ೬೫ ಪ್ರಶ್ನೆಗಳಲ್ಲಿ ಹತ್ತು ಪ್ರಶ್ನೆಗಳನ್ನು ಊಹೆ ಮಾಡುವುದಕ್ಕೆ ಸಾಧ್ಯ ಇದೆ. ಮಾನ್ಯ ಸದಸ್ಯರು ಹೋಲಿಕೆ ಎಂದು ಹೇಳಿದ್ದಾರಲ್ಲ, ನಾನು ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಅವರ ಪಟ್ಟಿ ಪ್ರಕಾರವೇ ೩ನೆಯ ಪ್ರಶ್ನೆ, ಇಲ್ಲಿ ೩ನೇ ಪ್ರಶ್ನೆ ಈ ಪ್ರಶ್ನೆಯಲ್ಲಿ ವರ್ಗಕ್ಕೆ ವಿಚ್ಛೆದನ ಕಂಡು ಹಿಡಿಯಿರಿ ಎಂದು ಇದೆ. ಇದರಲ್ಲಿ ೭೦–೨೦.೫ ಎಂದು ಇದೆ. ಇಲ್ಲಿ ಒರಿಜನಲ್ ಪೇಪರ್‌ನಲ್ಲಿ ೧೬–೨೦ ಎಂದಂ ಇದೆ. ಯಾವುದರಲ್ಲೂ ಹೋಲಿಕೆ ಇಲ್ಲ. ಮತ್ತೆ ನಾಲ್ಕನೇಯ ಪ್ರಶ್ನೆಯನ್ನು ಕೇಳಿದ್ದಾರೆ.

ಶ್ರೀ ಬಿ, ಎಸ್, ಯಡಿಯೂರಪ್ಪ.—ಪೂರ್ತಿಯಾಗಿ ಓದಿಬಿಡಿ.

ಶ್ರೀ ಎಂ. ರಘುಪತಿ.—ಪೂರ್ತಿಯಾಗಿ ನೀವೇ ಓದಿಬಿಡಿ. ನಾನೇಕೆ ಓದಲಿ. ಮತ್ತೆ ೪೧ನೇ ಪ್ರಶ್ನೆ. ಅವರ ಪ್ರಕಾರ ಇದಂ ೪೧ನೇ ಪ್ರಶ್ನೆ. $a \times ೨ + ೬ \times ೨ + ೬a = ೦$ ಆದರೆ $Xb೧/೨ + ೪$ ac ಇಲ್ಲಿ ಎಎಕ್ಸ್ ೨ ಮಾತ್ರ ಇದೆ, ಮ್ಯಾಥ ಮ್ಯಾಟಿಕ್ಸ್‌ನಲ್ಲಿ ಒಂದು ಮಾತನ್ನು ಹೇಳುತ್ತಾರೆ. ಒಂದೇ ಒಂದು ಪದ ವ್ಯತ್ಯಾಸವಾದರೂ ಸಂಪೂರ್ಣವಾಗಿ ಅಂಕೆಗಳು ವ್ಯತ್ಯಾಸವಾಗುತ್ತದೆ. ನಾನೇನೂ ಗಣಿತದಲ್ಲಿ ಪ್ರವೀಣನಲ್ಲ. ಆದರೆ ಸ್ವಲ್ಪ ಗೊತ್ತಿದೆ, ಇಲ್ಲಿ ಐದು ಪ್ರಶ್ನೆಗಳು ಮಾತ್ರ ಸ್ವಲ್ಪ ಹೊಲಿಕೆಯಾಗುವ ಸಾಧ್ಯತೆ ಇದೆ. ಉಳಿದವುಗಳೆಲ್ಲ. ಇಷ್ಟು ಬಿಟ್ಟು ಈ ಸದನಕ್ಕೆ ತಪ್ಪು ಮಾಹಿತಿ ಗೂಡಬೇಕಂ ಎಂದೇನೂ ನಾನೇನಾ ಇಲ್ಲ. ಸದನವನ್ನು ತಪ್ಪು ದಾರಿಗೆ ಎಳೆಯಂಬೇಕೆಂತಲೂ ಇಲ್ಲ. ನಾನು ಭಾಷಣ ಮಾಡುವಾಗ ಸ್ಪಷ್ಟವಾಗಿ ಹೇಳಿದ್ದೇನೆ. ಅದೇನೆಂದರೆ ಇಂತಹ ನಕಲು ಪ್ರಶ್ನೆ ಪತ್ರಿಕೆ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಬಾರದು. ಈ ತರಹ ನಡೆದಿದ್ದರೆ ಯಾವ ಅಧಿಕಾರಿಯೇ ಆಗಲಿ. ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುಕ್ಕೆ ನಾನು ತಯಾರಿದ್ದೇನೆ ಎಂದು ಹೇಳಿದ್ದೇನೆ, ಆದರೆ ಇಲ್ಲಿ ತರಹ ಇಲ್ಲ. ಆ ತರಹ ಇದಿದ್ದರೆ ಶಿಸ್ತಿನ ತೆಗೆದು ಕೊಳುತ್ತೇನೆ. ಎಂದು ಹೇಳಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಯೀಲ್ಡ್ ಆಗುವ ಹಾಗಿದ್ದರೆ ಒಂದೇ ಒಂದು ಕೇಳುತ್ತೇನೆ. ಒಂದೇ ಒಂದು ನಿಮಿಷ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ನನಗೆ ಒಂದು ನಿಮಿಷ ಅವಕಾಶ ಕೊಡಬೇಕು. ಮಾನ್ಯ ಸಚಿವರನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕು ಎಂದುಕೊಂಡು ನಾನು ಇದನ್ನು ಹೇಳುತ್ತಿಲ್ಲ. ಇದರಿಂದ ಗ್ರಾಮಾಂತರ ಪ್ರದೇಶದವರಿಗೆ ಅನ್ಯಾಯವಾಗುತ್ತದೆಂಬ ಕಾರಣದಿಂದ ಹೇಳುತ್ತಿದ್ದೇನೆ ಈಗ ಈ ಲೆಕ್ಕದ ಪ್ರಶ್ನೆ ಪತ್ರಿಕೆಯಲ್ಲಿರುವ ಒಂದೇ ಪ್ರಶ್ನೆಯನ್ನು ತೆಗೆದುಕೊಂಡರೆ ಬಯಲಾಗಿರುವ ಪ್ರಶ್ನೆ ಪತ್ರಿಕೆಯಲ್ಲಿಯೂ ಸಹ ಇದೇ ರೀತಿ ಇದೆ ಎಂಬುದನ್ನು ಮಾನ್ಯ ಸಚಿವರಂ ಒಪ್ಪಿಕೊಳ್ಳಬೇಕು. ಮತ್ತೆ ಲನೇ ಪ್ರಶ್ನೆಯನ್ನು ತೆಗೆದುಕೊಂಡರೂ ಸಹ...

ಶ್ರೀ ಎಂ. ರಘುಪತಿ.—ನಾನು ಮೊದಲು ಒಂದು ಪ್ರಶ್ನೆ ಮಾತ್ರ ಎಂದು ಹೇಳಿದ್ದೆ. ಆದರೆ ಈಗ ೫ ಪ್ರಶ್ನೆಗಳು ಒಂದೇ ರೀತಿ ಇವೆ ಎಂದು ಇಲ್ಲಿ ಟಿಕ್ ಮಾಡಿಕೊಂಡಿದ್ದೇನೆ. ಈ ಐದು ಪ್ರಶ್ನೆಗಳಿಗೆ ಇರುವಂತಹ ಅಂಕಗಳು ೯ ಮಾತ್ರ ಆದ್ದರಿಂದ...

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಗಳು ಹೇಳುವುದನ್ನು ನಾನು ಒಪ್ಪುವುದಿಲ್ಲ ಈ ಪ್ರಶ್ನೆಪತ್ರಿಕೆಗಳನ್ನು ನಾನು ತಮಗೇ ಕಳುಹಿಸಿಕೊಡುತ್ತೇನೆ ತಾವು ಇವುಗಳನ್ನು ಪರಿಶೀಲನೆ ಮಾಡಿ ನೋಡಿ. ನಾನು ಹೇಳಿದ್ದು ನಿಜವಾಗಿದ್ದರೆ ಈ ವಿಷಯವನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಿ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಈ ಪ್ರಕರಣದಲ್ಲಿ ಯಾರನ್ನೂ ರಕ್ಷಣೆ ಮಾಡ ಬೇಕೆಂಬ ಆಸೆಕ್ಕೆ ನನಗಿಲ್ಲ. ಯಾರನ್ನೂ ರಕ್ಷಣೆ ಮಾಡಿ ವಿದ್ಯಾರ್ಥಿಗಳಿಗೆ ತೊಂದರೆ ಉಂಟುಮಾಡಬೇಕು ಎಂಬುದೂ ಸಹ ನನ್ನ ವಂನಸ್ಸಿನಲ್ಲಿ ಇಲ್ಲ ವಿದ್ಯಾರ್ಥಿಗಳಿಗೆ ಯಾವ ರೀತಿಯಿಂದಲೂ ತೊಂದರೆಯಾಗ ಬಾರದು ಅವರಿಗೆ ನ್ಯಾಯ ಸಿಗಬೇಕೆಂಬುದೇ ನನ್ನ ಉದ್ದೇಶ. ಒಂದು ವೇಳೆ ಇದರಿಂದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತದೆ ಎಂದು ತಾವು ಹೇಳುವುದಾದರೆ ನಾನು ಯಾವ ಕ್ರಮ ಕೈಕೊಳ್ಳುವುದಕ್ಕೂ ತಯಾರಿದ್ದೇನೆ. ಈ ಸಭೆಗೆ ತಪ್ಪು ಮಾಹಿತಿ ಕೊಡಬೇಕೆಂದಾಗಲೀ ಅಥವಾ ಈ ಸದನವನ್ನು ತಪ್ಪು ದಾರಿಗೆ ಎಳೆಯಬೇಕೆಂದಾಗಲೀ ನಾನು ಆ ರೀತಿ ಹೇಳಿಲ್ಲ. ಈ ಹಿಂದೆ ನಾನು ಒಂದು ಪ್ರಶ್ನೆ ಎಂದು ಹೇಳಿದ್ದೆ ಆದರೆ ಅದು ಸರಿಯಲ್ಲ. ೯ ಅಂಕಗಳಿಗೆ ಸಂಬಂಧಪಟ್ಟಂತೆ ೫ ಪ್ರಶ್ನೆಗಳು ಒಂದೇ ರೀತಿ ಇವೆ ಒಟ್ಟು ೬೫ ಅಂಕಗಳು ಇರುವುದು. ಇದರಲ್ಲಿ ೯ ಅಂಕಗಳಿಗೆ ಸಂಬಂಧಪಟ್ಟ ೫ ಪ್ರಶ್ನೆಗಳು ಒಂದೇ ರೀತಿ ಇವೆ ನಾನು ಮೊದಲು ಒಂದು ಎಂದು ಹೇಳಿದ್ದೆ ಈಗ ೫ ಆಗಿರುವುದರಿಂದ ನಾನು ಈ ಸಭೆಯ ಕ್ಷಮೆ ಕೇಳುತ್ತೇನೆ. ನಾನು ತಮಗೆ ಈ ಅಸಲಿ ಮತ್ತು ನಕಲಿ ಪ್ರಶ್ನೆ ಪತ್ರಿಕೆಗಳು ಎರಡನ್ನೂ ಕಳುಹಿಸಿಕೊಡುತ್ತೇನೆ. ತಾವೇ ಪರಿಶೀಲನೆ ಮಾಡಿ ನೋಡಿ. ಇದನ್ನು ಪರಿಶೀಲನೆ ಮಾಡಿದ ನಂತರ ಹಕ್ಕುಚ್ಯುತಿ ಸಮಿತಿಗೆ ಈ ಪ್ರಕರಣವನ್ನು ಕಳುಹಿಸಬೇಕೇ ಅಥವಾ ಬೇಡವೇ ಎಂಬ ತೀರ್ಮಾನ ಕೈಕೊಳ್ಳುವುದನ್ನು ತಮಗೇ ಬಿಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದು ಲಕ್ಷಾಂತರ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪ್ರಶ್ನೆ ಯಾಗಿದೆ. ಆದ್ದರಿಂದ ವಿವರವಾಗಿ ಈ ಬಗ್ಗೆ ಹೇಳಲು ತಾವು ನನಗೆ ಅವಕಾಶ ಕೊಡಬೇಕು

ಅಧ್ಯಕ್ಷರು.—ನಾನು ನಿಮಗೆ ಅವಕಾಶ ಕೊಡುವುದಿಲ್ಲ ನೀವು ಕೊಟ್ಟ ನೋಟೀಸನ್ನು ರಿಜೆಕ್ಟ್ ಮಾಡಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಇದನ್ನು ರುಜುವಾತು ಮಾಡದಿದ್ದರೆ ನಾನು ನನ್ನ ಈ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ಶೇಕಡಾ ೮೦ರಷ್ಟು ಪ್ರಶ್ನೆಗಳು ಮೊದಲೇ ಬಹಿರಂಗವಾಗಿವೆ ಆದ್ದರಿಂದ ಇದರ ಬಗ್ಗೆ ಮಾತನಾಡಲು ತಾವು ನನಗೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವುದು ಬೇಡ ಅವರು ಹಿರಿಯರು ಸದಸ್ಯರಾಗಿದ್ದಾರೆ ಆದ್ದರಿಂದ ಅವರ ಸಲಹೆಗಳು ನಮಗೆ ಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಈ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳು ಹಿಸಿಕೊಡಬೇಕು. ಅಲ್ಲಿ ನಾನು ಹೇಳಿದ್ದು ರುಜುವಾತಾಗದಿದ್ದರೆ ನನ್ನ ವಿಧಾನಸಭಾ ಸದಸ್ಯತ್ವಕ್ಕೇ ರಾಜೀನಾಮೆ ಕೊಡಲು ಸಿದ್ಧನಾಗಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಈಗಾಗಲೇ ತಮ್ಮ ನೋಟೀಸನ್ನು ರಿಜೆಕ್ಟ್ ಮಾಡಿದ್ದೇನೆ ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—೬೫ ಅಂಕಗಳ ಪೈಕಿ ೫೭ ಅಂಕಗಳಿಗೆ ಸರಿಬಂಧಪಟ್ಟ ಪ್ರಶ್ನೆಗಳು ಮೊದಲೇ ಬಯಲಾಗಿವೆ. ಇದರಿಂದ ಗ್ರಾಮಾಂತರ ಪ್ರದೇಶಗಳ ರೈತರ ಮಕ್ಕಳಿಗೆ ಅನ್ಯಾಯ

ವಾಗುವುದಿಲ್ಲವೇ ? ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಮತ್ತು ತಾವು ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಿ ಕೊಡಬೇಕು. ಅಲ್ಲಿ ಇದನ್ನು ನಾನು ಸಾಬೀತು ಮಾಡದಿದ್ದರೆ ನನ್ನ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ.

ಅಧ್ಯಕ್ಷರು.–ತಾವು ಸಭೆಯ ಕಾರ್ಯಕಲಾಪಗಳಿಗೆ ಈ ರೀತಿ ಆತಂಕ ಮಾಡುವುದು ಸರಿಯಲ್ಲ ತಾವು ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.–ನಗರದಲ್ಲಿರುವ ವಿದ್ಯಾರ್ಥಿಗಳಿಗೆ ಮಾತ್ರ ಇದರಿಂದ ಅನು ಕೂಲವಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಇದರಲ್ಲಿ ತಪ್ಪು ದಾರಿಗೆ ಎಳೆಯುವಂತಹ ವಿಚಾರ ಯಾವುದೂ ಇಲ್ಲ ತಾವು ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.–ಮುಂದೆ ಇಂಥಾದ್ದು ನಡೆಯುವಾರದು ಅದಕ್ಕಾಗಿ ತಾವು ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಿಕೊಡಿ ಅಲ್ಲಿ ನಾನು ಇದನ್ನು ಸಾಬೀತು ಮಾಡದಿದ್ದರೆ ನನ್ನ ಈ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.–ಮಾನ್ಯ ಮಂತ್ರಿಗಳು ಈಗ ಹೇಳಿಕೆ ಕೊಟ್ಟಿದ್ದಾರೆ. ಅವರು ಈ ಸಭೆಯನ್ನು ತಪ್ಪು ದಾರಿಗೆ ಎಳೆಯುವಂತಹ ವಿಚಾರವನ್ನು ಏನೂ ಹೇಳಿಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.–ನಾಲ್ಕನೇ ತಾರೀಖು ತಮಗೆ ಕಳುಹಿಸಿಕೊಟ್ಟ ಪ್ರಶ್ನೆ ಪತ್ರಿಕೆಯ ಮತ್ತೊಂದು ಪ್ರತಿ ನನ್ನ ಪತ್ರಿರ ಇದೆ. ಇದನ್ನು ತಮಗೆ ಕಳುಹಿಸಿಕೊಡುತ್ತೇನೆ. ಹಕ್ಕು ಬಾಧ್ಯತಾ ಸಮಿತಿಗೆ ಇದನ್ನು ಕಳುಹಿಸಿಕೊಡಿ.

ಅಧ್ಯಕ್ಷರು.–ಈಗಾಗಲೇ ನಾನು ನನ್ನ ತೀರ್ಮಾನವನ್ನು ಹೇಳಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.–ತಾವು ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿ ಕೊಟ್ಟರೆ ಸತ್ಯ ಅಸತ್ಯಗಳೆಲ್ಲಾ ಹೊರಬರುತ್ತವೆ. ಇದರ ಜೊತೆಗೆ ಇಂಥಾದ್ದು ಇನ್ನು ಮುಂದೆ ನಡೆಯುವುದನ್ನು ತಡೆಗಟ್ಟಬಹುದು ಇವೊತ್ತಿನದಿವಸ ಈ ವಿಚಾರ ಬೆಂಗಳೂರು ನಗರದಲ್ಲಿ ಮನೆ ಮಾತಾಗಿದೆ.

ಅಧ್ಯಕ್ಷರು.–ನಾವು ಮತ್ತು ನೀವು ವಿದ್ಯಾರ್ಥಿಗಳಾಗಿದ್ದ ಕಾಲದಲ್ಲಿಯೂ ಸಹ ಪರೀಕ್ಷೆಯಲ್ಲಿ ಇಂತಿಂಥ ಪ್ರಶ್ನೆಗಳು ಬರಬಹುದೆಂದು ಊಹೆ ಮಾಡುತ್ತಿರಲಿಲ್ಲವೇ ?

ಶ್ರೀ ಬಿ. ಎಸ್. ಯಡಿಯೂರಪ್ಪ.–ಇಲ್ಲಿ ಬರವಣಿಗೆಯಲ್ಲಿ ವ್ಯತ್ಯಾಸವಾಗಿರೆಯೇ ಹೊರತು ಇನ್ನುಳಿದಂತೆ ಎಲ್ಲಾ ಪ್ರಶ್ನೆಗಳೂ ಒಂದೇ ರೀತಿಯಲ್ಲಿವೆ. ಆದ್ದರಿಂದ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.–ಮಾನ್ಯ ಅಧ್ಯಕ್ಷರೇ, ಆ ದಿನ ಇದೇ ಮಾನ್ಯ ಸದಸ್ಯರು ಈ ಪ್ರಶ್ನೆ ಪತ್ರಿಕೆ ವಿಚಾರ ಪ್ರಸ್ತಾಪ ಮಾಡಿದಾಗ ನಾನೂ ಸಹ ಸಭೆಯಲ್ಲಿದ್ದೆ. ಆಗ ಮಾನ್ಯ ಸಚಿವರು ಒಂದು ಹೇಳಿಕೆ ಕೊಟ್ಟರು. ಪ್ರಶ್ನೆ ಪತ್ರಿಕೆಗಳನ್ನು ಆ ದಿನ ವಿದ್ಯಾರ್ಥಿಗಳಿಗೆ ಕೊಟ್ಟ ಮೇಲೆ ಅದರ ಒಂದು ಕಾಪಿಯನ್ನು ಇವರು ತರಿಸಿಕೊಂಡು ನೋಡಿದ ನಂತರ ಒಂದು ಹೇಳಿಕೆ ಕೊಟ್ಟರು ಎಂದು ನಾನು ತಿಳಿದುಕೊಂಡಿದ್ದೇನೆ. ಮೊದಲೇ ಬಹಿರಂಗವಾದ ಪ್ರಶ್ನೆ ಪತ್ರಿಕೆಗೂ ಮತ್ತು ನಿಜವಾದ ಪ್ರಶ್ನೆ ಪತ್ರಿಕೆಗೂ ಹೋಲಿಕೆಯಲ್ಲಿ ಸಾಮ್ಯ ಬರುತ್ತಿಲ್ಲ, ಒಂದು ಪ್ರಶ್ನೆಯಲ್ಲಿ ಮಾತ್ರ ಸಾಮ್ಯ ಬರುತ್ತಿದೆ ಎಂದು ಇಲ್ಲಿ ಒಂದು ಹೇಳಿಕೆ ಕೊಟ್ಟರು. ಆಗ ನಾವು ಸಭ್ಯ, ಪ್ರಶ್ನೆ ಪತ್ರಿಕೆಗಳು ಬಯಲಾಗಿಲ್ಲ. ಬೇರೆ ವಿದ್ಯಾರ್ಥಿಗಳಿಗೂ ಈ ಪ್ರಶ್ನೆ ಪತ್ರಿಕೆಗಳು ಏನಾದರೂ ಸಿಕ್ಕಿದರೆ ಮೋಸವಾಗುತ್ತಿತ್ತು ಆದ್ದರಿಂದ ಸಿಗದಿದ್ದವರಿಗೆ ಅನ್ಯಾಯವಾಗಿಲ್ಲ ಎಂದು ನಾವು ತಿಳಿದುಕೊಂಡೆವು ಆದರೆ ಈಗ ಮಾನ್ಯ ಮಂತ್ರಿಗಳು ಕೇವಲ ಒಂದು ಪ್ರಶ್ನೆಯಲ್ಲ ನಾಲ್ಕೈದು ಪ್ರಶ್ನೆಗಳು ಹೋಲಿಕೆ ಮಾಡಿ ನೋಡಿದಾಗ ಸಾಮ್ಯ ಬರುತ್ತಿದೆ

ಎಂದು ಹೇಳಿದರು ಮಾನ್ಯ ಯಡಿಯೂರಪ್ಪನವರು ಮಾನ್ಯ ಮಂತ್ರಿಗಳ ಹೇಳಿಕೆ ಸರಿಯಲ್ಲವೆಂದು ಹೇಳುತ್ತಿದ್ದಾರೆ. ನಾಲ್ಕೈದು ಪ್ರಶ್ನೆಗಳಲ್ಲಿ ಮಾತ್ರವಲ್ಲ ಇನ್ನೂ ಅನೇಕ ಪ್ರಶ್ನೆಗಳಲ್ಲಿ ಸಾವಯ್ಕ ಬರುತ್ತಿದೆ ಯಾದರೂ ಮಾನ್ಯ ಮಂತ್ರಿಗಳು ಈ ಸದನಕ್ಕೆ ಪಾಸ್ತವಾಂಶಗಳನ್ನು ತಿಳಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಯಾವ ಒಂದು ಮಟ್ಟಕ್ಕೆ ಹೋಗುತ್ತಿದ್ದಾರೆಂದರೆ ತಾವು ಹೇಳಿದ್ದನ್ನು ರುಜುವಾತು ಮಾಡಿ ತೋರಿಸುತ್ತೇನೆ ಇಲ್ಲದಿದ್ದರೆ ರಾಜೀನಾಮೆ ಕೊಡುತ್ತೇನೆಂದು ಸಹ ಹೇಳುತ್ತಿದ್ದಾರೆ ಈ ಮಾತನ್ನು ಅವರು ಹೇಳಬೇಕೆಂದರೆ ಪ್ರಶ್ನೆಗಳು ಎಷ್ಟರ ಮಟ್ಟಿಗೆ ಒಂದಕ್ಕೊಂಯು ಸಾಮ್ಯ ಇದೆ ಎಂಬ ಬಗ್ಗೆ ಅವರು ಸಾಕಷ್ಟು ಅಭ್ಯಾಸ ಮಾಡಿದ್ದಾರೆಂದು ಅರ್ಥವಾಗುತ್ತದೆ.

ಆದ್ದರಿಂದ ಈ ವಿಚಾರದಲ್ಲಿ ಸರ್ಕಾರಕ್ಕೆ ಸವಾಲು ಹಾಕತಕ್ಕಂತ ಸಂದರ್ಭ ಮಾನ್ಯ ಸದಸ್ಯರಿಗೆ ಬರಬೇಕಾದರೆ ಇದಕ್ಕೆ ಸಕಾರಣಗಳು ಇವೆ ಎಂದಾಯಿತು. ಈ ರೀತಿ ಪರೀಕ್ಷೆ ಪ್ರಶ್ನೆ ಪತ್ರಿಕೆಗಳು ಪರೀಕ್ಷೆ ನಡೆಯುವುದಕ್ಕಿಂತ ಮೊದಲೇ ಹೊರ ಬಂದು ಪ್ರಾಮಾಣಿಕ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂಬ ಆಧಾರದ ಮೇಲೆ ಅವರು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯ ಒಬ್ಬ ಸದಸ್ಯರಿಗೆ ಮಾತ್ರ ಸೀಮಿತವಾದುದಲ್ಲ. ಏಕೆಂದರೆ ಇದು ಲಕ್ಷಾಂತರ ಮಕ್ಕಳಿಗೆ ಸಂಬಂಧಪಟ್ಟಿರತಕ್ಕ ಪ್ರಶ್ನೆಯಾಗಿದೆ. ಆದುದರಿಂದ ಈ ವಿಷಯದ ಬಗ್ಗೆ ಹೆಚ್ಚಿನ ಗಮನ ಕೊಡಬೇಕು.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಇಲ್ಲಿ ನನ್ನ ಸ್ವಂತ ಅನುಭವವನ್ನು ಹೇಳಬೇಕೆಂದು ತಮ್ಮ ಮುಂದೆ ಎದ್ದು ನಿಂತಿದ್ದೇನೆ. ನಾನು ಹಾಸನದಲ್ಲಿ ಇಂಟರ್ ಮೀಡಿಯೇಟ್ ಸ್ಟೂಡೆಂಟ್ ಆಗಿದ್ದಾಗ, ನನಗೆ ಎಕನಾಮಿಕ್ಸ್ ಓದುವುದಕ್ಕಾಗಲಿಲ್ಲ ಆಗ.....

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಚರಿತ್ರೆಯನ್ನು ನಮಗೆ ಏಕೆ ಹೇಳುತ್ತಿದ್ದೀರಿ ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಕೊಟ್ಟಿರುವ ಪ್ರಶ್ನೆ ಪತ್ರಿಕೆಯಲ್ಲಿ ೩೨ ಪ್ರಶ್ನೆಗಳು ಇವೆ. ಅವುಗಳಲ್ಲಿ ಸುಮಾರು ೩೦ ಪ್ರಶ್ನೆಗಳು ಸರಿಯಾಗಿ ಪರೀಕ್ಷೆಗೆ ಬಂದಿವೆ. ೩೦ ಪ್ರಶ್ನೆಗಳಲ್ಲಿ ೧೬ ಪ್ರಶ್ನೆಗಳು ಒಂದು ಶಬ್ದವೂ ವ್ಯತ್ಯಾಸ ಇಲ್ಲದಂತೆ ಬಂದಿದೆ. ಇನ್ನುಳಿದ ೧೪ ಪ್ರಶ್ನೆಗಳು ಸ್ವಲ್ಪ ಹಿಂದು ಮುಂದಾಗಿವೆ. ಈ ತರಹ ಹಿಂದು ಮುಂದಾಗುವುದಕ್ಕೆ ಕಾರಣ ಈ ಪ್ರಶ್ನೆ ಬರೆದುಕೊಂಡು ಬಂದ ಹುಡುಗ ಸರಿಯಾಗಿ ಬರೆದುಕೊಂಡಿಲ್ಲ ಆದುದರಿಂದ ಈವಿಷಯವನ್ನು ದಯಮಾಡಿ ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಿ

ಅಧ್ಯಕ್ಷರು.—ಇದಕ್ಕೆ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈಗ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ರಘುಪತಿಯವರು, ನಾನು ಕೊಟ್ಟಿರುವ ಪ್ರಶ್ನೆಗಳಲ್ಲಿ ಒಂದು ಮಾತ್ರ ಸರಿಯಾಗಿ ಬಂದಿತ್ತು ಎಂದು ನಿನ್ನೆ ಹೇಳಿದ್ದರು. ಈಗ ೫೫ ಪ್ರಶ್ನೆಗಳು ಬಂದಿವೆ ಎಂದು ಹೇಳುತ್ತಿದ್ದಾರೆ. ಈಗ ನನಗೆ ಮಾತನಾಡಲು ಅವಕಾಶ ಕೊಟ್ಟರೆ, ರಘುಪತಿಯವರು ನೀವು ಕೊಟ್ಟಿರುವ ೩೦ ಪ್ರಶೆ ಗಳು ಯಾಥಾವತ್ತಾಗಿ ಬಂದಿವೆ ಎಂದು ಹೇಳುತ್ತಾರೆ. ಆದನ್ನು ನಾನು ಪ್ರೂವ್‌ಮಾಡಿ ತೋರಿಸುತ್ತೇನೆ. ಇಲ್ಲದೇ ಹೋದರೆ ನಾನು ನನ್ನ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ.

ಅಧ್ಯಕ್ಷರು.—ನೀವು ಮುಂದುವರಿಸಲಿಕ್ಕೆ ಅನುಮತಿಯನ್ನು ನಿರಾಕರಿಸಿದ್ದೇನೆ. ಆದುದರಿಂದ ನಾವು ಮಾತನಾಡುವುದನ್ನು ನಿಲ್ಲಿಸಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ. ಇದು ಹುಡುಗರ ಭವಿಷ್ಯದ ಪ್ರಶ್ನೆ ಇಂದು ಪ್ರತಿನಿತ್ಯ ಮನೆಗಳಲ್ಲಿ ಈ ವಿಷಯ ಮನೆ ಮಾತಾಗಿದೆ. ದಯಮಾಡಿ ಇದಕ್ಕೆ ಕಾರಣರಾಗಿರುವ ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಸ್ವಾಮಿ.

ಶ್ರೀ ಎಸ್. ಆರ್. ಜೊಪ್ಪಾಯಿ.—ಈಗ ಅಧ್ಯಕ್ಷರು, ಎರಡೂ ಕಡೆಯವಾದಗಳನ್ನು ಕೇಳಿ ರೂಲಿಂಗ್ ಕೊಟ್ಟಿದ್ದಾರೆ. ಒಂದು ಸಾರಿ ರೂಲಿಂಗ್ ಕೊಟ್ಟ ಮೇಲೆ ಮತ್ತೆ ಚರ್ಚೆಯನ್ನು ತಂದು ವರಿಸಲಿಕ್ಕೆ ಅವಕಾಶವಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ,—ನಾನು ಇಷ್ಟೇ ಹೇಳುವುದು, ನಾನು ಒಬ್ಬ ಶಾಸಕನಾಗಿ ಹೇಳುತ್ತಿದ್ದೇನೆ. ಇದು ಅನ್ಯಾಯವಾಗಿದೆ ದಿನನಿತ್ಯ ಪ್ರಶ್ನೆಪತ್ರಿಕೆಗಳನ್ನು ೫೦ ರೂಪಾಯಿ ಗಳಿಗೆಲ್ಲಾ ಮಾರುತ್ತಿದ್ದಾರೆ. ಇದರಿಂದ ಹಳ್ಳಿಗಳಲ್ಲಿ ಪ್ರಾಮಾಣಿಕವಾಗಿ ವಿದ್ಯಾಭ್ಯಾಸ ಮಾಡುತ್ತಿರುವ ವಂಕ್ಕಳಿಗೆ ಬಹಳ ಅನ್ಯಾಯವಾಗುತ್ತಿದೆ. ಆದುದರಿಂದ ಇದನ್ನು ದಯಮಾಡಿ ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ಸಾರಿ ರೂಲಿಂಗ್ ಕೊಟ್ಟ ಮೇಲೂ ಮತ್ತೆ ಚರ್ಚೆ ಮಾಡಲಿಕ್ಕೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ನಿಮ್ಮ ರೂಲಿಂಗ್‌ನ್ನು ಪುನರ್ ಪರಿಶೀಲನೆ ಮಾಡಿ ನನಗೆ ಮಾತನಾಡಲು ಅವಕಾಶ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ನಾವು ನೆಕ್ಸ್ಟ್ ಸಬ್‌ಜೆಕ್ಟ್‌ಗೆ ಹೋಗೋಣ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಇದು ವಂಕ್ಕಳ ಭವಿಷ್ಯದ ಮಾತು ಆದ್ದರಿಂದ ಮಾನ್ಯ ಅಧ್ಯಕ್ಷರೇ ಈ ವಿಷಯವನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಿ ಎಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ನಾವು ಈ ವಿಷಯವನ್ನು ವಿಚಾರಣೆ ಮಾಡುತ್ತೇವೆ.

(ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ಅಧ್ಯಕ್ಷ ಪೀಠದ ಮುಂಬಾಗಕ್ಕೆ ಬಂದರು).

ಶ್ರೀ ಬಿ. ಎಸ್. ಯಡಿಯೂರಪ್ಪ,—ಅಧ್ಯಕ್ಷರೇ ಈ ವಿಷಯವನ್ನು ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಿ ನ್ಯಾಯ ಸಿಗುವಂತಹ ವ್ಯವಸ್ಥೆ ಮಾಡಬೇಕು.

(ಗೊಂದಲ)

ಅಧ್ಯಕ್ಷರು.—ನಾವು ಏನು ಮಾಡಬೇಕೋ ಅದನ್ನು ಮಾಡೋಣ, ನೀವು ಈಗ ನಿಮ್ಮ ಸ್ಥಳದಲ್ಲಿ ಹೋಗಿ ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ,—ನನ್ನ ಆರ್‌ಗ್ಯುಮೆಂಟ್‌ನ್ನು ತಾವು ಕೇಳದೆಯೇ ಒಂದು ತೀರ್ಮಾನಕ್ಕೆ ಬಂದು ರೂಲಿಂಗ್ ಕೊಡುವುದಾದರೆ. ಇದು ಸರಿಯಾದುದಲ್ಲ. ನನ್ನ ಸಮಸ್ಯೆಯನ್ನು ನೀವು ಕೇಳಬೇಕು. ಅದು ಸಮಂಜಸವಲ್ಲವೆಂದು ತಿಳಿದರೆ ರೂಲಿಂಗ್ ಕೊಡಬೇಕು ಆದನ್ನು ನಾನು ಒಪ್ಪುತ್ತೇನೆ.

(ಗೊಂದಲ)

ಅಧ್ಯಕ್ಷರು.—ಯಡಿಯೂರಪ್ಪನವರೇ, ತಾವು ನಿಮ್ಮ ಸ್ಥಳದಲ್ಲಿ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಕುಳಿತು ಕೊಳ್ಳುವುದಿಲ್ಲ. ವಾರ್ಷಲ್‌ರವರನ್ನು ಕರೆಸುತ್ತೀರೇನು ? ಕರೆಯಿಸಿ ನಾನು ಹೊರಗಡೆ ಹೋಗುವುದಕ್ಕೆ ಸಿದ್ಧನಿದ್ದೇನೆ. ಈ ರಾಜ್ಯದಲ್ಲಿ ಶಿಕ್ಷಣ ಇಲಾಖೆಯಲ್ಲಿ ಬಹಳ ಮೋಸ ನಡೆಯುತ್ತಿದೆ. ಇದರಲ್ಲಿ ಕೆಲವು ಅಧಿಕಾರಿಗಳು ಶಾಮೀಲಾಗಿದ್ದಾರೆ. ನಮಗೆ ನ್ಯಾಯ ಬೇಕು.

(ಗೊಂದಲ)

ಅಧ್ಯಕ್ಷರು.— ಯಡಿಯೂರಪ್ಪನವರೇ, ನೀವು ಹೋಗಿ ನಿಮ್ಮ ಸ್ಥಳದಲ್ಲಿ ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ —ನನಗೆ ಸರಿಯಾದ ಉತ್ತರ ಸಿಗದೇ ಇದ್ದುದರಿಂದ ನಾನು ಸಭೆಯಿಂದ ಹೊರಗಡೆ ಹೋಗುತ್ತಿದ್ದೇನೆ.

(ಶ್ರೀ ಬಿ. ಎಸ್. ಯಡಿಯೂರಪ್ಪನವರು ತಮ್ಮ ಸಹ ಸದಸ್ಯರಾದ ಶ್ರೀ ವಸಂತ ಬಂಗೇರ ಅವರೊಡನೆ ಸಭಾತ್ಯಾಗ ಮಾಡಿದರು)

ಪ್ರಕಟಣೆ

ಅಧ್ಯಕ್ಷರು.— ಒಂದು ಪ್ರಕಟಣೆ ಇದೆ. ಅದು ಈ ರೀತಿ ಇದೆ.

ಇದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಬಂದಿದೆ. ಕರ್ನಾಟಕ ವಿಧಾನ ಪರಿಷತ್ತಿನ ೧೦ಳನೇ ನಿಯಮದ ಮೇರೆಗೆ ದಿನಾಂಕ ೪-೪-೮೫ರಂದು ಕರ್ನಾಟಕ ಗ್ರಾಮೋದ್ಯೋಗ ತಿದ್ದುಪಡಿ ವಿಧೇಯಕ ವಿಧಾನ ಪರಿಷತ್ತಿನಲ್ಲಿ ಯಾವುದೇ ತಿದ್ದುಪಡಿಯಾಗದೇ ಅಂಗೀಕಾರವಾಗಿದೆ.

೧೨-೩೦ ಪಿ. ಎಮ್.

ಗಮನ ಸೆಳೆಯುವ ಸೂಚನೆ

ದುಷ್ಕರ್ಮಿಗಳು ಹಾಗೂ ಅಧಿಕಾರಿಗಳು, ಸಾರ್ವಜನಿಕರ ಹಾಗೂ ಕಾಂಗ್ರೆಸ್ (ಐ) ಕಾರ್ಯಕರ್ತರ ಮೇಲೆ ನಡೆಸಿರುವ ಹಲ್ಲೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಕೆಲವು ಅಧಿಕಾರಿಗಳು ಹಾಗೂ ದುಷ್ಕರ್ಮಿಗಳು, ಕಾಂಗ್ರೆಸ್ (ಐ) ಕಾರ್ಯಕರ್ತರನ್ನೊಳಗೊಂಡಂತೆ, ಸಾರ್ವಜನಿಕರ ಮೇಲೆ ನಡೆಸಿದ ದೌರ್ಜನ್ಯದ ವಿಚಾರಗಳ ಬಗ್ಗೆ ಬಳಾಡಳಿತ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಒಳಾಡಳಿತ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸುಮಾರು ೧೯ ಜಿಲ್ಲೆಗಳಿಂದ ವಿಷಯುಗಳನ್ನು ನಾವು ಸಂಗ್ರಹಿಸಬೇಕಾಗಿರುವುದರಿಂದ ಅದು ರಾತ್ರಿ ಬರುವುದು ತಡವಾಗಿದೆ. ಅದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಓದಬೇಕಾದರೆ ಸಾಧ್ಯವಾಗುತ್ತಿಲ್ಲ. ಅದು ಇಂಗ್ಲೀಷ್ ನಲ್ಲಿದೆ. ಆದ್ದರಿಂದ ದ್ರುಮಾಡಿ ಅದನ್ನು ಇಂಗ್ಲೀಷ್‌ನಲ್ಲಿ ಓದಲು ಅಪ್ಪಣೆ ಕೊಡಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

The subject raised by the Hon'ble Members relates to the alleged atrocities on the public in general and Congress-I workers in particular. Twenty two instances have been quoted in support of the atrocities said to have been committed. The "atrocities" detailed in the Calling Attention Notice have been enquired into. The position is as under :—

1. Sri R. M. Khanapur of Kiruvatti, Ex-vice President of TDB, Yellapur, complained of harassment on the Congress-I workers and that there was no response from the police.

In Hosalli, two kilometer from kiruvatti, Sri R. M. Khanapur, Ex-President, TDB, is said to be trying to gain popularly by projecting Thayavva w/o Basavannappa who wishes to construct a small house for worship of a family deity on Government land measuring five guntas. This land has already been allotted by the BDO to contruct a samaj Mandir. The construction work on the Mandir is in progress